# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 61 (643 ) |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 22/07/2024 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್‌ಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| ಆ) | ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಅಧ್ಯಯನ/ಮೌಲ್ಯಮಾಪನ ನಡೆಸಿದೆಯೇ; ಹಾಗಿದ್ದಲ್ಲಿ, ಈ ಅಧ್ಯಯನ/ಮೌಲ್ಯಮಾಪನದ ವಿವರಗಳೇನು (ಜಿಲ್ಲಾವಾರು ಪೂರ್ಣ ವಿವರ ನೀಡುವುದು) | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಎನ್.ಸಿ.ಡಿ ವಿಭಾಗದಲ್ಲಿ ಮೂರು ಕ್ಯಾನ್ಸರ್‌ಗಳಾದ ಬಾಯಿ, ಸ್ತನ ಹಾಗೂ ಗರ್ಭ ಕಂಠದ ಕ್ಯಾನ್ಸರ್‌ಗಳ ತಪಾಸಣೆ, ಪ್ರಕರಣಗಳ ಪತ್ತೆ ಹಚ್ಚುವಿಕೆ ಹಾಗೂ ತೃತೀಯ ಹಂತದ ಚಿಕಿತ್ಸೆ ರವಾನೆಯ ಕಾರ್ಯಕ್ರಮಗಳನ್ನು ಎನ್.ಸಿ.ಡಿ ಪೋರ್ಟಲ್‌ನಲ್ಲಿ ದಾಖಲೆ ಮಾಡಲಾಗುತ್ತದೆ.<br><br>NCD PORTAL DATA ಪ್ರಕಾರ:-<br><br>(see table below) |
| ಇ) | ರಾಜ್ಯದಲ್ಲಿ 35-40 ರ ವಯಸ್ಸಿನ ಮಹಿಳೆಯರಿಗೆ ಕಡ್ಡಾಯವಾಗಿ ಕ್ಯಾನ್ಸರ್ ತಪಾಸಣೆಯನ್ನು ಕಡ್ಡಾಯಗೊಳಿಸಿದೆಯೇ; ಇಲ್ಲದಿದ್ದಲ್ಲಿ, ಕಡ್ಡಾಯಗೊಳಿಸಲಾಗುವುದೇ: (ಪೂರ್ಣ ಮಾಹಿತಿ ನೀಡುವುದು) | • ಕೇಂದ್ರ ಸರ್ಕಾರದ 2013ರ ಎನ್.ಪಿ.ಎನ್.ಸಿ.ಡಿ. ಮಾರ್ಗಸೂಚಿ ಅನ್ವಯ ತಪಾಸಣೆ ಐಚ್ಛಿಕ ವಿಷಯವಾಗಿರುತ್ತದೆ. ಪ್ರಸ್ತುತ ಎನ್.ಸಿ.ಡಿ ಕಾರ್ಯಕ್ರಮದಡಿಯಲ್ಲಿ ಬಾಯಿ, ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್‌ಗೆ ಸಂಬಂಧಿಸಿದಂತೆ ತಪಾಸಣೆಯನ್ನು ಎಲ್ಲಾ ಹಂತದ ಆರೋಗ್ಯ ಕ್ಷೇಮಾ ಕೇಂದ್ರಗಳಲ್ಲಿ ಸಮುದಾಯ ಆರೋಗ್ಯ ಅಧಿಕಾರಿಗಳು ಮಹಿಳೆಯರಿಗೆ ಪ್ರಾರಂಭಿಕ ಹಂತದಲ್ಲೇ ಪತ್ತೆಹಚ್ಚುವ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.<br>• ರಾಜ್ಯದಲ್ಲಿ 35-40 ರ ವಯಸ್ಸಿನ ಮಹಿಳೆಯರಿಗೆ ಕ್ಯಾನ್ಸರ್ ತಪಾಸಣೆಯನ್ನು ಕಡ್ಡಾಯಗೊಳಿಸಿರುವುದಿಲ್ಲ.<br>• **ಮೂರು ವಿಧದ ಕ್ಯಾನ್ಸರ್‌ಗಳಿಗೆ** (ಬಾಯಿ, ಸ್ತನ ಹಾಗೂ ಗರ್ಭ ಕಂಠದ ಕ್ಯಾನ್ಸರ್ ಗಳಿಗೆ) ತಪಾಸಣೆಯ ವಿಧಾನಗಳು:-<br>1) VIA (Visual Inspection with Acetic Acid) ಪರೀಕ್ಷೆ ಹಾಗೂ PAP SMEAR ಪರೀಕ್ಷೆ ಮುಖಾಂತರ: ಗರ್ಭಕಂಠದ ಕ್ಯಾನ್ಸರ್ ಪತ್ತೆ ಹಚ್ಚಲಾಗುತ್ತಿದೆ. |

| ಕ್ಯಾನ್ಸರ್ ವಿವರ | ತಪಾಸಣೆ | ದೃಢಪಟ್ಟ ಪ್ರಕರಣಗಳು | ಸರ್ಕಾರಿ ಮತ್ತು AB-ArK ಅನುದಾನಿತ ಆಸ್ಪತ್ರೆ ಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ವಿವರ |
|---|---|---|---|
| ಗರ್ಭ ಕಂಠದ ಕ್ಯಾನ್ಸರ್ | 8762861 | 5473 | 2066 |
| ಸ್ತನ ಕ್ಯಾನ್ಸರ್ | 11078028 | 2213 | 828 |
| ಬಾಯಿ ಕ್ಯಾನ್ಸರ್ | 22530427 | 5787 | 2818 |

<table>
<tr>
<td></td>
<td></td>
<td>2) ಸ್ವಯಂ ದೈಹಿಕ ಪರೀಕ್ಷೆ ಮುಖಾಂತರ: ಸ್ತನ ಕ್ಯಾನ್ಸರ್ ಪತ್ತೆಹಚ್ಚಲಾಗುತ್ತಿದೆ.<br>3) ಬಾಯಿ ಪರೀಕ್ಷೆ ಮುಖಾಂತರ: ಬಾಯಿ ಕ್ಯಾನ್ಸರ್ ಪತ್ತೆಹಚ್ಚಲಾಗುತ್ತಿದೆ.<br><br>• ಸಂಶಯಾಸ್ಪದ ಪ್ರಕರಣಗಳ ಹೆಚ್ಚಿನ ತಪಾಸಣೆಗಾಗಿ ಮೇಲಿನ ಹಂತದ ಸರ್ಕಾರಿ ಆಸ್ಪತ್ರೆಗಳಿಗೆ ಅಂದರೆ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಿಗೆ ಕಳುಹಿಸಲಾಗುವುದು.<br>• ಮುಂದುವರೆದು ಹೆಚ್ಚಿನ ಚಿಕಿತ್ಸೆಗಾಗಿ ತೃತೀಯ ಹಂತದ ಆಸ್ಪತ್ರೆಗಳಿಗೆ AB-ARK ಅಡಿಯಲ್ಲಿ ಚಿಕಿತ್ಸೆಗಳಿಗಾಗಿ ಕಳುಹಿಸಿಕೊಡಲಾಗುತ್ತದೆ.</td>
</tr>
<tr>
<td>ಈ)</td>
<td>ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ರಾಷ್ಟ್ರೀಯ ಆರೋಗ್ಯ ಅಭಿಯಾನ ಮತ್ತು ಇತರೆ ಯೋಜನೆಗಳಡಿ ಕ್ಯಾನ್ಸರ್ ತಡೆಗಟ್ಟಲು ನೀಡುತ್ತಿರುವ ನೆರವು ಮತ್ತು ಸವಲತ್ತುಗಳು ಯಾವುವು: (ಪೂರ್ಣ ಮಾಹಿತಿ ನೀಡುವುದು)</td>
<td>• ಕೇಂದ್ರ ಸರ್ಕಾರದಿಂದ ರಾಜ್ಯದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ ಅಡಿಯಲ್ಲಿ ಸಮಗ್ರ ಎನ್.ಸಿ.ಡಿ ಕಾರ್ಯಕ್ರಮದಡಿ ಕ್ಯಾನ್ಸರ್ ಖಾಯಿಲೆಗೆ ಸಂಬಂಧಿಸಿದಂತೆ ತಪಾಸಣೆ ಹಾಗೂ ಚಿಕಿತ್ಸೆಯನ್ನು ಜಿಲ್ಲಾ ಮಟ್ಟದ ಸರ್ಕಾರಿ ಆಸ್ಪತ್ರೆಗಳಿಂದ ಆರೋಗ್ಯ ಕ್ಷೇಮ ಕೇಂದ್ರದ ಹಂತದವರೆಗೂ ನಡೆಸಲಾಗುತ್ತಿದೆ. ಗರ್ಭಕಂಠದ ಕ್ಯಾನ್ಸರ್ ಮತ್ತು ಸ್ತನ ಕ್ಯಾನ್ಸರ್ ತಡೆಗಟ್ಟಲು ಸರ್ಕಾರದ ಹಂತದಲ್ಲಿ ಪ್ರಾರಂಭವಾಗುತ್ತಿರುವ ಸವಲತ್ತುಗಳು ಈ ಕೆಳಕಂಡಂತೆ ಇರುತ್ತದೆ:-<br>➢ 2024-25ನೇ ಸಾಲಿನಲ್ಲಿ ರಾಜ್ಯ ಬಜೆಟ್ ಅನುದಾನದಡಿಯಲ್ಲಿ Colpscope ಯಂತ್ರಗಳ ಖರೀದಿಗಾಗಿ ಅನುದಾನ ಅನುಮೋದನೆಗೊಂಡಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿದೆ.<br>1) ಬೆಂಗಳೂರು ನಗರ (ಕೆ.ಸಿ.ಜನರಲ್ ಆಸ್ಪತ್ರೆ)<br>2) ಉಡುಪಿ (ಜಿಲ್ಲಾ ಆಸ್ಪತ್ರೆ)<br>3) ಕೋಲಾರ (ಜಿಲ್ಲಾ ಆಸ್ಪತ್ರೆ)<br>4) ದಾವಣಗೆರೆ (ಜಿಲ್ಲಾ ಆಸ್ಪತ್ರೆ),<br>➢ 2024-25ನೇ ಸಾಲಿನಲ್ಲಿ NHM ಕಾರ್ಯಕ್ರಮದ ಅನುದಾನದಡಿಯಲ್ಲಿ Colpscope ಯಂತ್ರಗಳ ಖರೀದಿಗಾಗಿ ಅನುದಾನ ಅನುಮೋದನೆಗೊಂಡಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿದೆ.<br>1) ದಕ್ಷಿಣಕನ್ನಡ (ಜಿಲ್ಲಾ ಆಸ್ಪತ್ರೆ)<br>2) ಧಾರವಾಡ (ಜಿಲ್ಲಾ ಆಸ್ಪತ್ರೆ)<br>3) ಬಳ್ಳಾರಿ (ಜಿಲ್ಲಾ ಆಸ್ಪತ್ರೆ)<br>4) ಬೆಂಗಳೂರು ನಗರ (ಜಯನಗರ ಸಾರ್ವಜನಿಕ ಆಸ್ಪತ್ರೆ),<br>➢ ಸ್ತನ ಕ್ಯಾನ್ಸರ್ ತಪಾಸಣೆಗಾಗಿ ಕೆಳಕಂಡ 20 ಜಿಲ್ಲಾ ಆಸ್ಪತ್ರೆಗಳಿಗೆ Digital Mammogram ಯಂತ್ರಗಳನ್ನು ಟೆಂಡರ್ ಮುಖಾಂತರ ಖರೀದಿಸಲು ಪ್ರಕ್ರಿಯೆಯು ಕೊನೆಯ ಹಂತದಲ್ಲಿದೆ.
<table>
<tr><td>1</td><td>ದಕ್ಷಿಣ ಕನ್ನಡ ಜಿಲ್ಲಾ ಆಸ್ಪತ್ರೆ,</td><td>11</td><td>ಬೆಂಗಳೂರು ನಗರ -ಸಿ. ವಿ ರಾಮನ್ ಆಸ್ಪತ್ರೆ</td></tr>
<tr><td>2</td><td>ತುಮಕೂರು ಜಿಲ್ಲಾ ಆಸ್ಪತ್ರೆ,</td><td>12</td><td>ಬೆಂಗಳೂರು ನಗರ- ಜಯನಗರ ಸಾರ್ವಜನಿಕ ಆಸ್ಪತ್ರೆ</td></tr>
<tr><td>3</td><td>ವಿಜಯಪುರ ಜಿಲ್ಲಾ ಆಸ್ಪತ್ರೆ,</td><td>13</td><td>ಉಡುಪಿ ಜಿಲ್ಲಾ ಆಸ್ಪತ್ರೆ</td></tr>
<tr><td>4</td><td>ಚಿತ್ರದುರ್ಗಾ ಜಿಲ್ಲಾ ಆಸ್ಪತ್ರೆ,</td><td>14</td><td>ಬಳ್ಳಾರಿ ಜಿಲ್ಲಾ ಆಸ್ಪತ್ರೆ</td></tr>
</table>
</td>
</tr>
</table>

| | | | |
|---|---|---|---|
| 5 | ದಾವಣಗೆರೆ ಚಿಗಟೇರಿ ಜಿಲ್ಲಾ ಆಸ್ಪತ್ರೆ, | 15 | ರಾಮನಗರ ಜಿಲ್ಲಾ ಆಸ್ಪತ್ರೆ |
| 6 | ಬಾಗಲಕೋಟೆ ಜಿಲ್ಲಾ ಆಸ್ಪತ್ರೆ, | 16 | ದೊಡ್ಡಬಳ್ಳಾಪುರ ಸಾರ್ವಜನಿಕ ಆಸ್ಪತ್ರೆ |
| 7 | ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆ | 17 | ಬೆಳಗಾವಿ ಜಿಲ್ಲಾ ಆಸ್ಪತ್ರೆ |
| 8 | ಹಾವೇರಿ ಜಿಲ್ಲಾ ಆಸ್ಪತ್ರೆ | 18 | ಬೀದರ್ ಜಿಲ್ಲಾ ಆಸ್ಪತ್ರೆ |
| 9 | ಕೋಲಾರ ಎಸ್‌ಎನ್ ಆರ್ ಜಿಲ್ಲಾ ಆಸ್ಪತ್ರೆ, | 19 | ರಾಯಚೂರು ಜಿಲ್ಲಾ ಆಸ್ಪತ್ರೆ |
| 10 | ಚಿಕ್ಕಬಳ್ಳಾಪುರ ಜಿಲ್ಲಾ ಆಸ್ಪತ್ರೆ | 20 | ಉತ್ತರ ಕನ್ನಡ ಜಿಲ್ಲಾ ಆಸ್ಪತ್ರೆ |

2024-25ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯಾಗಿರುವಂತೆ Day Care Chemotherapy Centres ಗಳನ್ನು ಆರೋಗ್ಯ ಇಲಾಖೆ ಯಡಿಯಲ್ಲಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ Day Care Chemotherapy ಕೇಂದ್ರಗಳನ್ನು ಅತೀ ಶೀಘ್ರದಲ್ಲಿ ಪ್ರಾರಂಭಿಸಲಾಗುವುದು.

| | | |
|---|---|---|
| ಉ) | ರಾಜ್ಯ ಸರ್ಕಾರ 9 ರಿಂದ 14 ವರ್ಷದ ಹೆಣ್ಣು ಮಕ್ಕಳಿಗೆ ನೀಡಲಾಗುವ Human Papilloma Virus-Data Test ನ್ನು ಕಡ್ಡಾಯ ಮಾಡಲಾಗುತ್ತಿದೆಯೇ: ಮತ್ತು ಈ ಲಸಿಕೆಯನ್ನು ಮುಫತ್ತಾಗಿ ಅಥವಾ ರಿಯಾಯಿತಿ ನೀಡಲು ಆಲೋಚಿಸಿದೆಯೇ? (ಪೂರ್ಣ ಮಾಹಿತಿ ನೀಡುವುದು) | ಪ್ರಸ್ತುತ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ 9 ರಿಂದ 14 ವರ್ಷದ ಹೆಣ್ಣು ಮಕ್ಕಳಿಗೆ ನೀಡಲಾಗುವ Human Papilloma Virus-Data Test ನ್ನು ಕಡ್ಡಾಯಗೊಳಿಸುವ ನಿಟ್ಟಿನಲ್ಲಿ ಯಾವುದೇ ಮಾರ್ಗಸೂಚಿ ಸ್ವೀಕೃತಗೊಂಡಿರುವುದಿಲ್ಲ, ಹಾಗೂ ಲಸಿಕೆ ಸರಬರಾಜು ಆಗಿರುವುದಿಲ್ಲ. ಮಾರ್ಗಸೂಚಿ ಬಂದಲ್ಲಿ, ಈ ನಿಟ್ಟಿನಲ್ಲಿ ಕ್ರಮವಹಿಸಲಾಗುವುದು. |

**ಸಂಖ್ಯೆ**:HFW 45 STQ 2024.

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು